**ಅಸಲು ದಾವೆ ಸಂಖ್ಯೆಃ 820/2020**
**ಪಿ.ಡಬ್ಲೂ.1**

**ಸಾಕ್ಷಿಗೆ ದಿನಾಂಕಃ14/11/2022 ರಂದು ಪ್ರಮಾಣ ವಚನ ಭೋದಿಸಲಾಯಿತು.**

**ಮುಖ್ಯವಿಚಾರಣೆಃ ವಾದಿ ಪರ ವಕೀಲರಿಂದ**

ನಾನು ಈ ದಾವೆಯಲ್ಲಿ ವಾದಿಯಾಗಿದ್ದು, ನಾನು ನನ್ನ ಮುಖ್ಯವಿಚಾರಣೆಯನ್ನು ಪ್ರಮಾಣಪತ್ರದ ಮೂಲಕ ಸಲ್ಲಿಸಿದ್ದು. ಅದರಲ್ಲಿ ಹೇಳಿರುವ ಎಲ್ಲ ವಿಷಯಗಳು ಸತ್ಯವಾಗಿರುತ್ತವೆ ಮತ್ತು ನನಗೆ ತಿಳಿದಿರುತ್ತವೆ. ಅದಕ್ಕೆ ನನ್ನ ಸಹಿಯನ್ನು ಹಾಕಿರುತ್ತೇನೆ. ಸದರಿ ಪ್ರಮಾಣ ಪತ್ರದಲ್ಲಿರುವ ಮಾಹಿತಿಯನ್ನು ನಾನೇ ಹೇಳಿ ಬರೆಯಿಸಿರುತ್ತೇನೆ. ಈ ದಾವೆಗೆ ಸಂಬಂಧಿಸಿದಂತೆ ದಾಖಲೆಗಳನ್ನು ಹಾಜರುಪಡಿಸಿರುತ್ತೇನೆ. ಅವುಗಳನ್ನು ನೋಡಿದರೆ ಗುರುತಿಸುತ್ತೇನೆ.

ಶಾಲಾ ಬಿಡುಗಡೆ ಪ್ರಮಾಣ ಪತ್ರವನ್ನು ಹಾಜರುಪಡಿಸಿರುತ್ತೇನೆ. ಅದನ್ನು **ನಿ.ಪಿ.1** ಎಂದು ಗುರುತಿಸಲಾಯಿತು. ಎರಡು ವರ್ಗಾವಣೆ ಪ್ರಮಾಣ ಪತ್ರವನ್ನು ಹಾಜರುಪಡಿಸಿರುತ್ತೇನೆ. ಅದನ್ನು **ನಿ.ಪಿ.2 ಮತ್ತು 3** ಎಂದು ಗುರುತಿಸಲಾಯಿತು. ಒಂದು ಆಧಾರ ಪತ್ರವನ್ನು ಹಾಜರುಪಡಿಸಿರುತ್ತೇನೆ. ಅದನ್ನು **ನಿ.ಪಿ.4** ಎಂದು ಗುರುತಿಸಲಾಯಿತು. ಮತದಾನದ ಗುರುತಿನ ಚೀಟಿಯನ್ನು ಹಾಜರುಪಡಿಸಿರುತ್ತೇನೆ. ಅದನ್ನು **ನಿ.ಪಿ.5** ಎಂದು ಗುರುತಿಸಲಾಯಿತು. ಪ್ಯಾನ ಕಾರ್ಡನ್ನು ಹಾಜರುಪಡಿಸಿರುತ್ತೇನೆ. ಅದನ್ನು **ನಿ.ಪಿ.6** ಎಂದು ಗುರುತಿಸಲಾಯಿತು. ಎಸ್.ಎಸ್.ಎಲ್.ಸಿ. ಅಂಕಪಟ್ಟಿಯನ್ನು ಹಾಜರುಪಡಿಸಿರುತ್ತೇನೆ. ಅದನ್ನು **ನಿ.ಪಿ.7** ಎಂದು ಗುರುತಿಸಲಾಯಿತು. ಮತ್ತೊಂದು ಮತದಾರರ ಗುರುತಿನ ಚೀಟಿಯನ್ನು ಹಾಜರುಪಡಿಸಿರುತ್ತೇನೆ. ಅದನ್ನು **ನಿ.ಪಿ.8** ಎಂದು ಗುರುತಿಸಲಾಯಿತು.

**ಪಾಟೀ ಸವಾಲು: ಪ್ರತಿವಾದಿ ಪರ ವಕೀಲರಿಂದ**

ನನ್ನನ್ನು ಶಾಲೆಗೆ ಪ್ರವೇಶವನ್ನ ನನ್ನ ತಂದೆ ಮಾಡಿರುತ್ತಾರೆ. ನನ್ನ ತಂದೆ ಮಾಹಿತಿ ನೀಡಿದಂತೆ ಶಾಲಾ ದಾಖಾಲಾತಿಗಳಲ್ಲಿ ನಮೂದಿಸಿಕೊಂಡಿರುತ್ತಾರೆ ಎಂದರೆ ಸರಿ. ನನ್ನ ಜನ್ಮ ದಿನಾಂಕ 10/06/1987. ನನ್ನ ತಂದೆ ಶಾಲೆಯಲ್ಲಿ ನನ್ನ ಜನ್ಮ ದಿಃ10/06/1987 ಎಂದು ಹೇಳಿದ್ದರು

ಶಾಲಾ ದಾಖಾತಿಯಲ್ಲಿ ನಮೂದಿಸಿಲ್ಲ. ಇತ್ತೀಚೆಗೆ ನನ್ನ ಸಹೋದರನ ದಾಖಲಾತಿ ಪರಿಶೀಲಿಸುವ ಸಮಯದಲ್ಲಿ ನನ್ನ ಜನನ ದಿನಾಂಕ ತಪ್ಪಾಗಿರುವುದು ತಿಳಿದು ಬಂದಿರುತ್ತದೆ. ಈಗ ನನಗೆ ನನ್ನ ಜನ್ಮ ದಿನಾಂಕ ಭವಿಷ್ಯಕ್ಕಾಗಿ ಬೇಕಾಗಿದೆ. ಸಾಕ್ಷಿಯು ನನಗೆ ಹೊರದೇಶಕ್ಕಾಗಿ ಹೋಗಬೇಕಾಗಿ , ಹಾಗಾಗಿ ನನ್ನ ಜನ್ಮ ದಿನಾಂಕ ತಿದ್ದುಪಡಿ ಆಗಬೇಕು. ನಾನು ಪಿಯುಸಿ ವರೆಗೆ ಶಾಲೆ ಕಲಿತಿದ್ದೇನೆ. ಹೊರದೇಶಕ್ಕೆ ಹೋಗಲು ಜನ್ಮ ದಿನಾಂಕ ತಿದ್ದು ಪಡಿ ಅವಶ್ಯಕತೆ ಇಲ್ಲ ಎಂದರೆ ಸರಿಯಲ್ಲ.ಸುಳ್ಳು ದಾಖಲೆಗಳನ್ನು ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನನೆ ಎಂದರೆಸ ರಿಯಲ್ಲ,

**ಮರುವಿಚಾರಣೆಃ ಇಲ್ಲಾ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು).**

**ಓ.ಹೇ.ಕೇ.ಸರಿ ಇದೆ,**

**1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು**
**ಮತ್ತು ಜೆ.ಎಮ್.ಎಫ್.ಸಿ.ನ್ಯಾಯಾಲಯ,**
**ವಿಜಯಪುರ.**